06.09.2022

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳಲ್ಕೆರೆ.

ಸಿ ಸಿ ನಂಃ 1043/2020

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ಬಿ.ಟಿ. ಮಹಂತೇಶ್ | ಪಿ.ಡಬ್ಲ್ಯೂ | : | 3 |
| ತಂದೆಯ ಹೆಸರು | : | ತಿಮ್ಮಣ್ಣ | ಸಿ.ಡಬ್ಲ್ಯೂ | : | 3 |
| ವಯಸ್ಸು | : | 26 ವರ್ಷ | ದಿನಾಂಕ | : | 06.09.2022 |
| ಉದ್ಯೋಗ | : | ಹೋಟೆಲ್ ಕೆಲಸ | | | |
| ವಾಸಸ್ಥಳ | : | ಹೊಳಲ್ಕೆರೆ ಟೌನ್ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿಯು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಗೈರು ಹಾಜರು ಇರುವ ಆರೋಪಿಯೂ ಸಹಾ ನನಗೆ ಗೊತ್ತಿಲ್ಲ. (ಆರೋಪಿತರ ಪರ ವಕೀಲರು ಗೈರು ಹಾಜರಿರುವ ಆರೋಪಿತರನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲಾ ಎಂದು ನುಡಿದಿರುತ್ತಾರೆ). ಚಾಸಾ–**2, 4** ಮತ್ತು **5** ಸಹಾ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಯಾವ ವಿಚಾರ ಸಹಾ ನನಗೆ ಗೊತ್ತಿಲ್ಲ. ಈ ಸಂಬಂಧ ನಾನು ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆ ನೀಡಿಲ್ಲ.

ಸಾಕ್ಷಿಗೆ ನಿಪಿ–**1** ನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ**1**(ಸಿ) ಎಂದು ಗುರುತಿಸಲಾಯಿತು.

ಸುಮಾರು **3 –4** ವರ್ಷಗಳ ಹಿಂದೆ ನಿಪಿ–**1** ಕ್ಕೆ ನಾನು ಎನ್.ಜಿ. ಹಳ್ಳಿ ಬಸ್ ನಿಲ್ದಾಣದ ಬಳಿ ಸಹಿ ಮಾಡಿರುತ್ತೇನೆ. ನಿಪಿ–**1** ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಪೊಲೀಸರು ಅದರ ವಿಚಾರಗಳನ್ನು ನನಗೆ ಓದಿ ಹೇಳಿಲ್ಲ.ನಿಪಿ: **1** ಕ್ಕೆ ಸಹಿ ಮಾಡುವಾಗ ಸಮಯ ಎಷ್ಟಾಗಿತ್ತೆಂದು ನನಗೆ ನೆನಪಿಲ್ಲ. ನಿಪಿ–**1** ಕ್ಕೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂಬುದು ಸಹಾ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮದ್ಯದ ಪೌಚುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ನಿಪಿ–1 ಮತ್ತು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ

ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

## ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ದಿಃ 08.11.2012 ರಂದು ಸಂಜೆ 4.45 ಗಂಟೆಗೆ ಈ ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ–1 ರವರು ತಾಲ್ಲೂಕು ಕಛೇರಿಯ ಬಳಿ ಇದ್ದ ನನ್ನನ್ನು ಮತ್ತು ಚಾಸಾ–2 ರವರನ್ನು ಕರೆಸಿಕೊಂಡು ಈ ಪ್ರಕರಣದ ಸಂಪೂರ್ಣ ಮಾಹಿತಿ ತಿಳಿಸಿ ಎನ್.ಜಿ. ಹಳ್ಳಿ ಗ್ರಾಮದ ಗೇಟ್ ಬಳಿ ಯಾರೋ ಇಬ್ಬರೂ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿದ್ದು ದಾಳಿ ಮಾಡಿಲು ಹೋಗುತ್ತಿದ್ದೇವೆ ಪಂಚರಾಗಿ ನೀವುಗಳು ಸಹಕರಿಸಬೇಕು ಎಂದು ನಮ್ಮನ್ನು ಪಂಚರಾಗುವಂತೆ ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ಅವರ ಕೋರಿಕೆಗೆ ಒಪ್ಪಿ ನಾನು ಮತ್ತು ಚಾಸಾ–2 ರವರು ಅವರ ಸಿಬ್ಬಂದಿಯವರೊಂದಿಗೆ ಚಾಸಾ–1 ರವರ ಇಲಾಖಾ ಜೀಪಿನಲ್ಲಿ ಸಂಜೆ 05.00 ಗಂಟೆ ಸಮಯದಲ್ಲಿ ಠಾಣೆಯನ್ನು ಬಿಟ್ಟು ಸ್ವಲ್ಪ ದೂರದಲ್ಲಿಯೇ ನಮ್ಮ ಜೀಪನ್ನು ನಿಲ್ಲಿಸಿ ಕಾಲ್ನಡಿಯಲ್ಲಿ ನಡೆದುಕೊಂಡು ಎನ್.ಜಿ.ಹಳ್ಳಿ ಗೇಟ್ ಹತ್ತಿರಕ್ಕೆ ಸಂಜೆ 05.30 ರ ಸಮಯಕ್ಕೆ ಹೋಗಿ ತಲುಪಿ ಮರೆಮಾಚಿ ನಿಂತು ನೋಡಿದಾಗ ಒಬ್ಬ ಹೆಂಗಸು ಮತ್ತು ಒಬ್ಬ ಗಂಡಸು ಒಂದು ರಟ್ಟಿನ ಬಾಕ್ಸಿ ನಲ್ಲಿ ಮಧ್ಯವನ್ನು ಇಟ್ಟುಕೊಂಡು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದುದ್ದು ನಮಗೆ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿಯವರನ್ನು ಪೊಲೀಸರು ಹಿಡಿಯಲು ಮುಂದಾದಾಗ ಸಮವಸ್ತ್ರದಲ್ಲಿದ್ದ ಪೊಲೀಸರನ್ನು ನೋಡಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದವರು ರಟ್ಟಿನ ಬಾಕ್ಸ್ ಅನ್ನು ಅಲ್ಲಿಯೇ ಬಿಟ್ಟು ಸಮೀಪದ ಜೋಳದ ಹೊಲದ ಪೊದೆಯಲ್ಲಿ ತಪ್ಪಿಸಿಕೊಂಡರು ಮತ್ತು ಪೊಲೀಸರು ಅವರನ್ನು ಬೆನ್ನಟ್ಟಿ ಹುಡುಕಿದರು ಸಹಾ ಅವರು ತಪ್ಪಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವುಗಳು ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದ ಸ್ಥಳಕ್ಕೆ ಹಿಂತಿರುಗಿ ಬಂದು ಅಲ್ಲಿಯೇ ಬಸ್ ನಿಲ್ದಾಣದ ಬಳಿ ನಿಂತಿದ್ದ ಚಾಸಾ–4 ಮತ್ತು ಚಾಸಾ–5 ರವರ ಬಳಿ ಓಡಿ ಹೋದವರ ಹೆಸರು ಮತ್ತು ವಿಳಾಸ ಕೇಳಲಾಗಿ ಅವರು 1. ರಾಮಾಂಜನೇಯ ತಂದೆ ಕೃಷ್ಣಪ್ಪ, 30 ವರ್ಷ, ಹೋಟೇಲ್ ಕೆಲಸ, ಹೊಳಲ್ಕೆರೆ ಟೌನ್ ವಾಸಿ ಮತ್ತು 2. ಸಾಕಮ್ಮ ಗಂಡ ಚಂದ್ರಪ್ಪ, 40 ವರ್ಷ, ಚಿಲ್ಲರೆ ಅಂಗಡಿ ವ್ಯಾಪಾರ, ಹೊಳಲ್ಕೆರೆ ಟೌನ್ ನಿವಾಸಿಗಳು ಎಂಬ ವಿಚಾರ ನಮಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನಂತರ ಚಾಸಾ–4 ಮತ್ತು ಚಾಸಾ–5 ರವರನ್ನು ವಿಚಾರ ಮಾಡಲಾಗಿ

06.09.2022

ಅವರುಗಳು ಓಡಿ ಹೋದ ಇಬ್ಬರೂ ಯಾವುದೇ ಪರವಾನಿಗೆ ಇಲ್ಲದೇ ಮಧ್ಯ ಮಾರಾಟ ಮಾಡುತ್ತಿದ್ದರು ಎಂದು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ರಟ್ಟಿನ ಬಾಕ್ಸ್ ಅನ್ನು ಪರಿಶೀಲಿಸಿದಾಗ 180 ಎಂ.ಎಲ್ ನ 39 ಓ.ಟಿ ವಿಸ್ಕಿ ಪೌಚ್ ಗಳು ಇದ್ದವು ಎಂದರೆ ಸರಿಯಲ್ಲ. ಅವುಗಳ ಪೈಕಿ ಒಂದು ಪೌಚ್ ಅನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ನಮ್ಮ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಸುತ್ತಿ ಪಿ.ಆರ್.ಓ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಧ್ಯದ ಬೆಲೆ ಸುಮಾರು **1950** / –ರೂ. ಎಂದು ಅಂದಾಜು ಮಾಡಲಾಗಿತ್ತು ಎಂದರೆ ಸರಿಯಲ್ಲ. ಉಳಿದ ಮಧ್ಯದ ಪೌಚ್ ಗಳನ್ನು ನಿಪಿ–**1** ರಂತೆ ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–1 ನ್ನು ಸಂಜೆ 06.00 ರಿಂದ 07.00 ರ ಸಮಯದಲ್ಲಿ ನಮ್ಮ ಸಮಕ್ಷಮ ಬರೆಯಲಾಗಿದೆ ಎಂದರೆ ಸರಿಯಲ್ಲ. ನಾನು ನಿಪಿ:**1** ರ ಪಂಚನಾಮೆ ನೆಡೆಸುವ ಕಾಲಕ್ಕೆ ಖುದ್ದು ಹಾಜರಿದ್ದು ನಿಪಿ–**1** ಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ತನ್ನ ಹೇಳಿಕೆಯನ್ನು ಅಲ್ಲಗಳೆದಿದ್ದು ಸಾಕ್ಷಿಯ ಹೇಳಿಕೆಯನ್ನು ನಿಪಿ:**4** ಎಂದು ಗುರುತಿಸಲಾಯಿತು.

ನನಗೆ ನಿಪಿ–**1** ಮತ್ತು ನಿಪಿ–**4** ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಉದ್ದೇಶದಿಂದ ನನಗೆ ಏನೂ ಗೊತ್ತಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ನಿಪಿ–**1** ರಂತೆ ಪಂಚನಾಮೆ ಮಾಡಿಲ್ಲ, ನನ್ನ ಸಮಕ್ಷಮ ಯಾವುದೇ ಮಧ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ, ಈ ಸಂಬಂಧ ನಾನು ನಿಪಿ–**4** ರಂತೆ ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆ ನೀಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರವಾಗಿ : ಇರುವುದಿಲ್ಲ**

## ಮರು ವಿಚಾರಣೆ :ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

06.09.2022

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.